

## ಆನೆ ದಂಡು

ಇದೇನು ಬರುವ ಜನರನ್ನು ಸ್ವಾಗತ ಕೋರಲು ಆನೆಗಳನ್ನು ನಿಲ್ಲಿಸಿದ್ದಾರೆ ಎಂದು ಹುಬ್ಬೇರಿಸದಿರಿ. ಇವು ಆನೆಗಳ ಮುಖವನ್ನು ಹೋಲುವ ಕೆತ್ತನೆಗಳು. ಆದರೆ ಕಲಾವಿದನ ಕೈಚಳಕದಿಂದಾಗಿ ಇವುಗಳು ಜೀವಂತಿಕೆಯನ್ನು ಪಡೆದಿವೆ ಅಂದರೆ ತಪ್ಪಿಲ್ಲ. ಇಂತಹ ಅಪೂರ್ವ ದೃಶ್ಯ ಮೂಡಬಿದಿರೆಯ ಆಳ್ವಾಸ್ ವಿದ್ಯಾ ಸಂಸ್ಥೆಯಲ್ಲಿ ಕಾಣಸಿಗುತ್ತದೆ.

**-ನಿತ್ಯ ಎಸ್., ಮೂಡಬಿದಿರೆ**

## ಸ್ತೋತ್ರಾಂಜನೇಯ

ರಾಜ್ಯದ ಇತಿಹಾಸ ತಜ್ಞರಲ್ಲಿ ಒಬ್ಬರಾಗಿರುವ ಕೆಳದಿ ಗುಂಡಾ ಜೋಯಿಸ ಅವರ ತಾತ ಎಸ್.ಕೆ. ಲಿಂಗಣ್ಣಯ್ಯನವರು ನೂರು ವರ್ಷಗಳ ಹಿಂದೆ (15-08-1914) ಒಂದು ಅಪರೂಪದ ಚಿತ್ರ ಬಿಡಿಸಿದ್ದಾರೆ. ಸಂಜೀವಿನಿ ಪರ್ವತವನ್ನು ಎತ್ತಿ ಹಿಡಿದಿರುವ ಆಂಜನೇಯ ಚಿತ್ರದಲ್ಲಿ ಆಂಜನೇಯನ ಕೆಲವು ಭಾಗಗಳನ್ನು ಹೊರತುಪಡಿಸಿದರೆ, ಉಳಿದ ಎಲ್ಲಾ ಭಾಗಗಳಲ್ಲಿಯೂ ಆಂಜನೇಯನ ಕುರಿತು ಸಂಸ್ಕೃತದಲ್ಲಿ ಶ್ಲೋಕವನ್ನು ಬರೆಯಲಾಗಿದೆ. ಅತಿಸೂಕ್ಷ್ಮವಾಗಿ ಅವಲೋಕಿಸಬಹುದಾದ ಈ ಚಿತ್ರದ ಮೂಲ ಪ್ರತಿಯು ಸದ್ಯಕ್ಕೆ ಕೆಳದಿಯ ಗುಂಡಾ ಜೋಯಿಸರ ಸುಪರ್ದಿಯಲ್ಲಿದೆ. ಅವರು ಆ ಅಪರೂಪದ ಪೇಂಟಿಂಗ್ ಚಿತ್ರವನ್ನು ಮರು ಮುದ್ರಿಸಿ ತಮ್ಮ ಆಪ್ತರಿಗೆ ನೀಡುವ ಮೂಲಕ ತಮ್ಮ ತಾತನ ಕಲಾ ಕೌಶಲ್ಯವನ್ನು ಇತರರಿಗೂ ತಿಳಿಸುತ್ತಿದ್ದಾರೆ.

**ಚಿತ್ರ-ಬರಹ: ಬಸವಾಸಿ ಕೃಷ್ಣಮೂರ್ತಿ, ಬೆಂಗಳೂರು**





## ಕಾಡು ಬೆಂಡೆ

ದಟ್ಟವಾದ ಹಳದಿ ಎಸಳುಗಳ ನಡುವೆ ಒಳಭಾಗದಲ್ಲಿ ಕಾಡಿಗೆ ಬಣ್ಣವಿರುವ ಇದು ಕಾಡು ಬೆಂಡೆಯ ಹೂ. ಹೊಲದಂಚಿನ ಮುಳ್ಳು ಕಂಟಿಗಳ ನಡುವೆ ಹಬ್ಬಿಕೊಳ್ಳುವ ಈ ಕಾಡು ಬೆಂಡೆ ಬಳ್ಳಿ ಬೇಸಿಗೆಯಲ್ಲಿ ಮಾತ್ರ ಹೂಗಳನ್ನು ಬಿಡುತ್ತದೆ. ಈ ಕಾಡು ಬೆಂಡೆಯ ನಡುವೆ ಹಿತ್ತಲ ತರಕಾರಿ ಬೀಜಗಳನ್ನು ಹಾಕಿದರೆ ಅದು ದೊಡ್ಡದಾಗುವವರೆಗೂ ಯಾವುದೇ ಪ್ರಾಣಿಗಳು ಬಾಯಿ ಹಾಕಲಾರವು ಎನ್ನುವ ನಂಬಿಕೆ ಹಿರಿಯರದ್ದಾಗಿತ್ತು. ಕಾರಣ ಈ ಕಾಡು ಬೆಂಡೆಯ ಬಳ್ಳಿಗೆ ಮೈ ತುಂಬಾ ಮುಳ್ಳು.

**ಚಿತ್ರ-ಬರಹ: ದತ್ತಾತ್ರಯ ಭಟ್ಟ, ಕಣ್ಣಿಪಾಲ ಯಲ್ಲಾಪುರ**